ನೆನಪಾಗುತ್ತವೆ. ಕೃಷ್ಣಮೂರ್ತಿ ಚಂದರ್ ಅವರ ಕತೆಗಳಲ್ಲಿ ಬರುವ ಅಗ್ರಹಾರದ ರಾಯರು ಮತ್ತು ಅವರ ಪತ್ನಿ ಶಾರದಮ್ಮ, ರಿಟೈರ್ಡ್ ಅಸಿಸ್ಟೆಂಟ್ ಸ್ಟೇಶನ್ ಮಾಸ್ಟರ್ ಎ. ನರಸಿಂಹ ಶಾಸ್ತ್ರಿಗಳು, ಎ. ರಾಮಣ್ಣ ಬೀದಿಯ ವಠಾರದಲ್ಲಿ ವಾಸವಾಗಿರುವ ವಾಸುದೇವರಾಯರು ಮತ್ತವರ ಪತ್ನಿ ಲಕ್ಷ್ಮಮ್ಮ, ತೊಗರಿಬೀದಿ ಆರನೇ ಕ್ರಾಸಿನ ಮೂಲೆಯ ಹಂಚಿನ ಮನೆಯ ರಂಗ ಅಯ್ಯಂಗಾರರು ಮತ್ತು ಅವರ ಧರ್ಮಪತ್ನಿ ಅಂಡಾಳಮ್ಮನವರು, ಶ್ರೀನಿವಾಸರಾಯರು ಮತ್ತು ಅವರ ಪತ್ನಿ ಅಹಲ್ಯಾಬಾಯಿ, ತೆಲುಗು–ತಮಿಳು–ಕನ್ನಡ ಎಲ್ಲ ಮಿಶ್ರವಾಗಿರುವ ಭಾಷೆಯಲ್ಲಿ ಮಾತನಾಡುತ್ತ ಕಟ್ಟಿಕೊಡುವ ಇಳಿವಯಸ್ಸಿನ ದಾಂಪತ್ಯದ ಒಂದು ಚಿತ್ರವೇನಿದೆ, ಅದನ್ನು ಮನಸ್ಸಲ್ಲಿ ಅಚ್ಚಾಗುವಂತೆ, ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದವರು ಎಸ್. ಸುರೇಂದ್ರನಾಥ್ ಅವರೆಂದರೆ ತಪ್ಪಾಗಲಾರದು. ಈ ಯಾವತ್ತೂ ವ್ಯಕ್ತಿಗಳು, ದಂಪತಿಗಳು, ಅವರ ಬದುಕು ಎಲ್ಲರಂತೆ ಸ್ವಸ್ಥವಾದದ್ದಲ್ಲ; ಅದರಲ್ಲೇನೋ ಅಸಡ್ಡಾಳತನ, ವಿಕಾರ, ವಕ್ರೀಭವನ ಇದೆ. ಅದು ಮೇಲ್ನೋಟಕ್ಕೆ ಲಘುವಾಗಿ, ಹಾಸ್ಯಾಸ್ಪದ ಎನಿಸಿದರೂ ಅದು ನಮ್ಮದೂ ಆಗಿರುವುದು ಗಮನಕ್ಕೆ ಬಂದಂತೆಲ್ಲ ಸಹಜವಾಗಿಯೇ ಗಂಭೀರ ಎನಿಸತೊಡಗುತ್ತದೆ. ಇದೊಂದು ಬಗೆಯ ವಾಸ್ತವದಲ್ಲಿ ಕಂಡೂ ಕಾಣದಂತಿರುವ ನಾಟಕೀಯತೆಯನ್ನು ಎತ್ತಿ ತೋರಿಸುವ ಮೂಲಕ ಸತ್ಯದರ್ಶನ ಮಾಡುವ ಪರಿ. ಸುರೇಂದ್ರನಾಥ್ ಅವರು ಸ್ವತಃ ನಾಟಕಕಾರರಾಗಿರುವುದರಿಂದ ಅವರಿಗಿದು ಸುಲಭವೂ ಸಹಜವೂ ಆಗಿತ್ತು ಎನ್ನಬಹುದೇನೋ. ಅವರ ‘ಕುರುವಿನ ಗುಲಾಮ’, ‘ನಾತಲೀಲೆ’, ‘ಗಿರಿಜಾಕಲ್ಯಾಣ’, ‘ಗುಪ್ತಸಮಾಲೋಚನೆ’, ‘ಶನಿಕಾಟದ ಅಂಗಡಿ’, ‘ಕರುಣಾಳು ಬೆಳಕೇ ತೊಲಗು’ ಕತೆಗಳ ಹೆಸರೇ ಸೂಚಿಸುವಂತೆ ಮನುಷ್ಯನ ಬದುಕಿನ ಮೇಲೆ ಒಂದು ಬಗೆಯ ವಾರೆನೋಟ ಬೀರುವ ಕತೆಗಳಿವು. ಹಾಗೆ ಮಾಡುತ್ತಲೇ ಅವನ ಅಸ್ಮಿತೆಯ ಪ್ರಶ್ನೆಯನ್ನು ತುಂಬ ಸುಪ್ತವಾಗಿ ತಡಕುತ್ತಿವೆ ಎಂದರೂ ತಪ್ಪಿಲ್ಲ. ಕೃಷ್ಣಮೂರ್ತಿ ಚಂದರ್ ಅವರಂತೂ ಅಸ್ಮಿತೆಯ ಪ್ರಶ್ನೆಯನ್ನೇ ಇಟ್ಟುಕೊಂಡು ಇಂಥ ಸಂಸಾರಗಳನ್ನು, ದಂಪತಿಗಳನ್ನು ಚಿತ್ರಿಸುತ್ತ ಕತೆಗೆ ಒಂದು ಬಗೆಯ ನವಿರಾದ ಹಾಸ್ಯದ ಲೇಪವನ್ನೂ, ಓದುಗನಿಗೆ ಓದು ಒಜ್ಜೆಯಾಗದ ಲಘುಭಾವವನ್ನೂ ನೀಡಲು ಬಳಸಿಕೊಳ್ಳುತ್ತಾರೆ. ಸುರೇಂದ್ರನಾಥ್ ಅವರ ಕತೆಗಳ ಅಂತರಾತ್ಮವೇ ಆಗಿರುವ ಒಂದು ವಿಧಾನ ಕೃಷ್ಣಮೂರ್ತಿ ಚಂದರ್ ಅವರಿಗೆ ಒಂದು ತಂತ್ರವಷ್ಟೇ ಆಗಿ ಇಲ್ಲಿ ಒದಗಿದಂತಿದೆ.

ಹೀಗಾಗಿ, ನಮಗೆ ಎರಡು ಬಗೆಯ ಕತೆಗಳ ಒಂದು ಹೈಬ್ರಿಡ್ ತಳಿ ಇಲ್ಲಿ ಸಿಗುತ್ತಿದೆ. ‘ಅಸಂವಹನ’ ಎಂಬ ಒಂದು ಕತೆ ಯಶವಂತ ಚಿತ್ತಾಲರ ‘ಪಯಣ’ ಕತೆಯನ್ನು ನೆನಪಿಸುವುದಾದರೂ ಕೇಂದ್ರದಲ್ಲಿ ಈ ಕತೆಯ ಗಮ್ಯ ಕೊಂಚ ಬೇರೆಯೇ ಇರುವಂತೆ ಕಾಣುತ್ತದೆ. ಹೀಗೆ ಈ ಸಂಕಲನದಲ್ಲಿ ಒಟ್ಟು ಹನ್ನೆರಡು ಕತೆಗಳಿವೆ. ರಾಜೀವ ತಾರಾನಾಥರು ಕತೆಗಾರರಿಗೆ ಹೇಳಿದ ಮೂರು ಕತೆಗಳ ನಿರೂಪಣೆಯೂ ಹೆಚ್ಚುವರಿಯಾಗಿ ಈ ಸಂಕಲನದಲ್ಲಿದ್ದು, ಇವು ಸ್ವತಃ ರಾಜೀವ ತಾರಾನಾಥರೇ ಎದುರಿಗಿದ್ದು ನೇರವಾಗಿ ನಮಗೇ ಹೇಳಿದಷ್ಟು ಆಪ್ತವಾದ ನಿರೂಪಣೆಯಲ್ಲಿವೆ. ಇದು ಈ ಸಂಕಲನದ ಒಂದು ವಿಶೇಷ. ಇಲ್ಲಿನ ಕೊನೆಯ ಎರಡು ಕತೆಗಳಲ್ಲಿ ಪ್ರತಿಯೊಂದೂ ಸ್ವತಂತ್ರವಾದ ಹಲವು ಕತೆಗಳಾಗಬಹುದಾದ ಮತ್ತು ಒಂದರಿಂದ ಒಂದು ತೀರ ಭಿನ್ನವಾದ ಕತೆಗಳೇ ಆಗುವಂಥ ಸಂಗತಿಗಳಿವೆ. ಹಾಗಾಗಿ ಕೇಂದ್ರ ಎನ್ನುವುದು ಚದುರುತ್ತದೆ. ಸಣ್ಣಕತೆ ಯಾವತ್ತೂ ಚದುರಿದ್ದನ್ನು ಏಕತ್ರಗೊಳಿಸುತ್ತ ಹೋಗುವ ಪ್ರಕಾರವೆಂದೇ ನಾವು ತಿಳಿದಿದ್ದೇವೆ. ಇಲ್ಲಿ ಅಂಥ ಪ್ರಯತ್ನ ಸಾಧ್ಯವಾಗುವುದಿಲ್ಲ. ಬದಲಿಗೆ ಇದೊಂದು ಲೋಕಾಭಿರಾಮದ ಹರಟೆಯಂತೆ ಸಾಗಿಯೂ ಒಂದು ವಿಚಿತ್ರ ಆಕರ್ಷಣೆಯನ್ನೂ ಹೊಂದಿರುವುದು ನಿಜ.

ಇತ್ತೀಚೆಗೆ ಬಂದ ಕಥಾಸಂಕಲನಗಳಲ್ಲಿ ಗಮನಿಸಬೇಕಾದ, ಚರ್ಚಿಸಬಹುದಾದಂಥ ಕಥಾಹಂದರ, ವಸ್ತು, ನಿರೂಪಣಾ ತಂತ್ರಗಳೆಲ್ಲ ಇರುವ ಬಹುಮುಖ್ಯ ಕೃತಿಯಿದು ಎನ್ನುವುದರಲ್ಲಿ ಅನುಮಾನವಿಲ್ಲ.